ತುರುವೇಕೆರೆ ತಾಲ್ಲೂಕಿನ ಮಲ್ಲಾಗಟ್ಟ ಕೆರೆಯಲ್ಲಿ ಮೀನು ಉತ್ಪಾದನಾ ಕೇಂದ್ರ.

2917(3321)

ಶ್ರೀ ಲಕ್ಷ್ಮೀನಾರಾಯಣ ಎಂ.ಡಿ(ಅಣ್ಣಯ್ಯ)(ತುರುವೇಕೆರೆ): ಮಾನ್ಯ ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನ ಮಲ್ಲಾಘಟ್ಟ ಕೆರೆಯಲ್ಲಿ ಮೀನು ಮರಿಯ ತಳಿ ಉತ್ಪಾದನೆ ಕೇಂದ್ರ ಪ್ರಾರಂಭ ಮಾಡಲಾಗುವುದೇ?

ಆ) ತಾಲ್ಲೂಕಿನಲ್ಲಿ ಇದು ಅತೀ ದೊಡ್ಡ ಕೆರೆಯಾಗಿದ್ದು, ಮೀನು ಬೆಳೆಯಲು ಭಾರಿ ಹೆಸರುವಾಸಿಯಾಗಿದ್ದು ಮತ್ತು ತುಂಬಾ ಆದಾಯ ಬರುವ ಈ ಕೆರೆಗೆ ಈ ಯೋಜನೆ ಅಳವಡಿಸಲು ಇರುವ ಅಡಚಣೆಗಳೇನು?

ಇ) ಈ ವರ್ಷದಿಂದಲಾದರೂ ಪ್ರಾರಂಭ ಮಾಡಲಾಗುವುದೇ?

ಶ್ರೀ ಬಿ.ರಮಾನಾಥ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು):

ಅ) ಇಲ್ಲ.

ಆ) ಈ ಕೆರೆಗೆ ಬಿತ್ತನೆಗೆ ಬೇಕಾದ ಮೀನುಮರಿಗಳನ್ನು ಹತ್ತಿರದ ಮಾರ್ಕೋನಹಳ್ಳಿ ಮೀನುಮರಿ ಉತ್ಪಾದನಾ ಕೇಂದ್ರ ಮತ್ತು ಭದ್ರಾ ಮೀನುಮರಿ ಉತ್ಪಾದನಾ ಕೇಂದ್ರಗಳಿಂದ ಸರಬರಾಜು ಮಾಡಿಕೊಳ್ಳಲಾಗುತ್ತಿದೆ. ಪ್ರತಿಯೊಂದು ಕೆರೆಯ ಹತ್ತಿರ ಮೀನುಮರಿ ತಳಿ ಉತ್ಪಾದನೆ ಕೇಂದ್ರ ಪ್ರಾರಂಭ ಮಾಡುವುದು ಆರ್ಥಿಕವಾಗಿ ಸಾಧ್ಯವಾಗದು.

ಇ) ಉದ್ಭವಿಸುವುದಿಲ್ಲ.

ತುಮಕೂರು ಜಿಲ್ಲೆಯಲ್ಲಿ ಉದ್ಯೋಗ ಏನಿಮಯ ಕೇಂದ್ರ ಕುರಿತು.

2918(3322)

ಶ್ರೀ ಲಕ್ಷ್ಮೀನಾರಾಯಣ ಎಂ.ಡಿ.(ಅಣ್ಣಯ್ಯ): ಮಾನ್ಯ ಕಾರ್ಮಿಕ ಹಾಗೂ ವಕ್ಫ್

ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯಲ್ಲಿ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಕಳೆದ 2 ವರ್ಷದಿಂದ ನೋಂದಾಯಿಸಿರುವ ಅಭ್ಯರ್ಥಿಗಳ ಸಂಖ್ಯೆ ಎಷ್ಟು?

ಆ) ನೋಂದಾಯಿಸಿದ ಅಭ್ಯರ್ಥಿಗಳಲ್ಲಿ ಎಷ್ಟು ಜನರಿಗೆ ನೌಕರಿ ಸಿಕ್ಕಿದೆ?

ಇ) ಉದ್ಯೋಗ ವಿನಿಮಯ ಕಚೇರಿಯಲ್ಲಿ ಯಾವ ರೀತಿ ಕೆಲಸಕ್ಕೆ ಸಂದರ್ಶನ ಕಳಿಸಿಕೊಡುವ ವ್ಯವಸ್ಥೆ ಇದೆ?

ಈ) ಕಚೇರಿಯಲ್ಲಿ ಕಂಪ್ಯೂಟರ್ ಅಳವಡಿಸಲಾಗಿದೆಯೇ?

ಶ್ರೀ ಎ.ಎಂ.ಹಿಂಡಸಗೇರಿ (ಕಾರ್ಮಿಕ ಹಾಗೂ ವಕ್ಫ್ ಸಚಿವರು):

ಅ) ಕಳೆದ 2 ವರ್ಷಗಳಲ್ಲಿ ಒಟ್ಟು 31,444 ಅಭ್ಯರ್ಥಿಗಳು ತುಮಕೂರು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಉದ್ಯೋಗ ನೆರವಿಗಾಗಿ ತಮ್ಮ ಹೆಸರನ್ನು ನೋಂದಾಯಿಸಿರುತ್ತಾರೆ.

ಆ) ಕಳೆದ ಎರಡು ವರ್ಷಗಳಲ್ಲಿ ಸದರಿ ಕೇಂದ್ರದಿಂದ ಒಟ್ಟು 2,149 ಅಭ್ಯರ್ಥಿಗಳಿಗೆ ಉದ್ಯೋಗ ಲಭಿಸಿದೆ.

ಇ) ಉದ್ಯೋಗ ವಿನಿಮಯ ಕೇಂದ್ರದಲ್ಲಿ ಅಭ್ಯರ್ಥಿಗಳ ನೋಂದಣಿ ಪುರಸ್ಕರಣೆ, ಉದ್ಯೋಗ ನೆರವು- ಇತ್ಯಾದಿ ಕಾರ್ಯಗಳನ್ನು ರಾಷ್ಟ್ರೀಯ ಉದ್ಯೋಗ ಸೇವಾ ಕೈಪಿಡಿಯಲ್ಲಿ ನೀಡಲಾಗಿರುವ ಮಾರ್ಗಸೂಚಿಗಳ ಆಧಾರ ನಿರ್ವಹಿಸಿಕೊಂಡು ಬರಲಾಗುತ್ತಿದ್ದು, ಅದರಂತೆ ನಿಯೋಜಕರಿಂದ ಅಧಿಸೂಚಿತವಾದ ಹುದ್ದೆಗೆ ಆಯಾ ಅಧಿಸೂಚನೆಯಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆ, ವಯೋಮಿತಿ, ಮೀಸಲಾತಿ, ವೃತ್ತಿ ಅನುಭವ- ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅರ್ಹ ಅಭ್ಯರ್ಥಿಗಳನ್ನು ನೋಂದಣಿ ಜೇಷ್ಠತೆ ಆಧಾರ ಆಯ್ಕೆ ಮಾಡಿ ನಿಗದಿತ ಅನುಪಾತದಲ್ಲಿ ಪುರಸ್ಕರಣೆ ಮಾಡಲಾಗುತ್ತದೆ. ಈ ಕಾರ್ಯ ವಿಧಾನವನ್ನು ರಾಜ್ಯದ ಎಲ್ಲಾ ಉದ್ಯೋಗ ವಿನಿಮಯ ಕೇಂದ್ರಗಳು ಪಾಲನೆ ಮಾಡಿಕೊಂಡು ಬರುತ್ತಿದೆ.

ಈ) ಇಲ್ಲ.

ತುರುವೇಕೆರೆ ತಾಲ್ಲೂಕು ವಡವನಗಟ್ಟ ಹಾಗೂ ಕಣತೂರು ಗ್ರಾಮಗಳಿಗೆ